ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

# Bangalore Electricity Supply Company Limited

ಮು.ಪ್ರ.ವ್ಯ(ನಿ.ವ್ಯ)ರವರ ಕಛೇರಿ
ಕಂಪನಿ ಕಾರ್ಯಾಲಯ,
ಬೆ.ವಿ.ಕಂ. ಕೆ.ಆರ್.ವೃತ್ತ,
ಬೆಂಗಳೂರು-560001

## ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿಯಲ್ಲಿ ಮಾಹಿತಿಯನ್ನು ಬೆ.ವಿ.ಕಂ.ನ ಅಂತರ್ಜಾಲದಲ್ಲಿ ಪ್ರಕಟಿಸುವ ಕುರಿತು.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂಖ್ಯೆ:ಬೆ.ವಿ.ಕಂ/ಮು.ಪ್ರ.ವ್ಯ(ಕಂ.ವ್ಯ)/ಬಿ.ಸಿ-9/ಆರ್.ಟಿ.ಐ/ಕ-1 /2012-13/ಸಿ.ವೈ.ಎಸ್-4506 ದಿ:10.01.2013.

2. ಈ ಕಛೇರಿ ಸುತೋಲೆ ಸಂಖ್ಯೆ:ಬೆ.ವಿ.ಕಂ/ಬಿಸಿ-9/ಮುಪ್ರವ್ಯ(ನಿ.ವ್ಯ)/ಉಪ್ರವ್ಯ(ಮಾ.ಹ) /2012-13/ಸಿ.ವೈ.ಎಸ್-6383 ದಿ:20.02.2013.

**ಪ್ರಸ್ತಾವನೆ:**

ಉಲ್ಲೇಖ 1ರ ಸುತ್ತೋಲೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ) ಪ್ರಕಾರ ಪ್ರತಿ ಕಛೇರಿಗಳಲ್ಲಿ ನಿರ್ವಹಿಸಲ್ಪಡುವ ಕಡತಗಳ ವಿವರಗಳನ್ನು (Cataloging and Indexing) ವಿಷಯ ಸೂಚಿಯೊಂದಿಗೆ ಗಣಕೀಕರಣಗೊಳಿಸಿ ಮಾಹಿತಿ ಬಯಸುವವರಿಗೆ ಕೂಡಲೆ ಲಭ್ಯವಾಗಿಸುವುದು ಮತ್ತು 4(1)(ಬಿ) ಅಡಿ ಎಲ್ಲಾ ಕಛೇರಿಗಳ ಹಾಗು ಅಲ್ಲಿನ ಹುದ್ದೆಗಳ ವಿವರ ಕುರಿತು 17 ಅಂಶಗಳನ್ನೊಳಗೊಂಡ ಪರಿಪೂರ್ಣಗೊಳಿಸಿದ ಮಾಹಿತಿಯನ್ನು ಸ್ವಯಂಪ್ರೇರಣೆಯಿಂದ ಆಯಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಂಕಲಿಸಿ ಬೆ.ವಿ.ಕಂ.ನ ಅಂತರ್ಜಾಲದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿತ್ತು.

ತತ್ಸಂಬಂಧವಾಗಿ ಕಂಪನಿ ಕಾರ್ಯಾಲಯದ ಶಾಖೆಗಳು, ಎಲ್ಲಾ ವಲಯ ಹಾಗೂ ವೃತ್ತ ಕಛೇರಿಗಳ ಪರಿಪೂರ್ಣಗೊಳಿಸಿದ 4(1)(ಎ) ಹಾಗೂ 4(1)(ಬಿ) ಮಾಹಿತಿಯನ್ನು ಬೆ.ವಿ.ಕಂ ಅಂತರ್ಜಾಲದಲ್ಲಿ ಈಗಾಗಲೆ ಪ್ರಕಟಿಸಲಾಗಿದೆ. ಅದರಂತೆಯೇ ಎಲ್ಲಾ ವಿಭಾಗ ಹಾಗೂ ಉಪವಿಭಾಗಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪರಿಪೂರ್ಣಗೊಳಿಸಿದ 4(1)(ಎ) ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಬೇಕಾಗಿರುತ್ತದೆ.

ಸುತ್ತೋಲೆಸಂಖ್ಯೆ:ಬೆ.ವಿ.ಕಂ/ಬಿಸಿ9/ಮು.ಪ್ರ.ವ್ಯ(ನಿ.ವ್ಯ)/ಉ.ಪ್ರ.ವ್ಯ(ಮಾ.ಹ)/ 2013-14/ಕ-1(8)/ಸಿವೈಎಸ್- 91 ದಿನಾಂಕ- 18/06/2013

ಬೆ.ವಿ.ಕಂ.ನ ಎಲ್ಲಾ ವಿಭಾಗ ಹಾಗೂ ಉಪವಿಭಾಗದ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ತಮ್ಮ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ-2005ರ ಸೆಕ್ಷನ್ 4(1)(ಎ)ನಲ್ಲಿ ಸೂಚಿಸಿರುವಂತೆ ತಮ್ಮ ಕಛೇರಿಗಳಲ್ಲಿ ನಿರ್ವಹಿಸಿರುವ ಕಡತಗಳನ್ನು ಈ ಕೆಳಗಿನ ನಮೂನೆಯಲ್ಲಿ ಪಟ್ಟಿ ಮಾಡಿ ಸದರಿ ಮಾಹಿತಿಯನ್ನು ಬೆ.ವಿ.ಕಂ.ನ ಅಂತರ್ಜಾಲದಲ್ಲಿ ಪ್ರಕಟಿಸಲು ಅನುವಾಗುವಂತೆ bescomrti2005@gmail.com ಇ-ಮೇಲ್ ವಿಳಾಸಕ್ಕೆ ದಿ: 06.07.2013ರರೊಳಗೆ ತಪ್ಪದೆ ಕಳುಹಿಸಲು ಸೂಚಿಸಿದೆ.

**ನಮೂನೆ-1**

| ಕ್ರಮ ಸಂಖ್ಯೆ | ಕಡತ ಸಂಖ್ಯೆ | ವಿಷಯ | ಕಡತದಲ್ಲಿರುವ ಪುಟಗಳ ಸಂಖ್ಯೆ | ಕಡತ ಪ್ರಾರಂಭಿಸಿದ ದಿನಾಂಕ | ಕಡತ ಮುಕ್ತಾಯಗೊಳಿಸಿದ ದಿನಾಂಕ | ಕಡತ ನಾಶಗೊಳಿಸಿದ ದಿನಾಂಕ | ಷರಾ |
|---|---|---|---|---|---|---|---|
| | | | | | | | |

18/6/13
ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರಗಳು)

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯಗಳು, ಬೆ.ವಿ.ಕಂ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಬೆ.ವಿ.ಕಂ.
3. ಎಲ್ಲಾ ಕಾರ್ಯಾನಿರ್ವಾಹಾಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆ.ವಿ.ಕಂ.
4. ಎಲ್ಲಾ ಸಹಾಯಕ ಕಾರ್ಯಾನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಬೆ.ವಿ.ಕಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮು.ಪ್ರ.ವ್ಯ.(ಹ ಮತ್ತು ವಾ), ಬೆ.ವಿ.ಕಂ. ರವರ ಆಪ್ತ ಕಾರ್ಯಾದರ್ಶಿರವರುಗಳಿಗೆ.
6. ಬೆ.ವಿ.ಕಂ ಅಂತರ್ಜಾಲ.
7. ಮಹಾ ಕಡತ.